ವಿಜಯ ಕರ್ನಾಟಕ

# ಮುಸ್ಲಿಮರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆ ಅಗತ್ಯ

**ವಿಕ ಸುದ್ದಿಲೋಕ** ಬೆಂಗಳೂರು

'ಮುಸ್ಲಿಂ ಸಮುದಾಯದವರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆ ಜಾರಿಗೆ ತರಬೇಕು. ಆಗ ಮಾತ್ರ ಈ ಸಮುದಾಯ ಸೂಕ್ತ ರಾಜಕೀಯ ಪ್ರಾತಿನಿಧ್ಯ ಪಡೆಯಲು ಸಾಧ್ಯ' ಎಂದು ರಾಷ್ಟ್ರೀಯ ಕಾನೂನು ಶಾಲೆಯ ಪ್ರೊ. ಅಬ್ದುಲ್ ಅಜೀಜ್ ಹೇಳಿದರು.




**ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಪ್ರೊ. ಬಿ.ಕೆ.ಚಂದ್ರಶೇಖರ್, ಪ್ರೊ. ಅಬ್ದುಲ್ ಅಜೀಜ್‌ರಿಂದ ಸಮಾಲೋಚನೆ.**

ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರ (ಸಿಎಸ್‌ಎಸ್‌ಇಐಪಿ) ನಗರದಲ್ಲಿ ಹಮ್ಮಿಕೊಂಡಿದ್ದ 'ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಕರ್ನಾಟಕದ ರಾಜಕೀಯ: ಪ್ರಜಾಪ್ರಭುತ್ವದ ಒಳಗೊಳ್ಳುವಿಕೆಯ ಸಮಸ್ಯೆಗಳು ಮತ್ತು ಸವಾಲುಗಳು' ವಿಚಾರ ಸಂಕಿರಣದಲ್ಲಿ ಭಾನುವಾರ ಮಾತನಾಡಿದರು.

'ಮುಸ್ಲಿಮರು ವಿಧಾನಸಭೆ, ಪರಿಷತ್‌ಗಳಲ್ಲಿ ಹೆಚ್ಚು ರಾಜಕೀಯ ಪ್ರಾತಿನಿಧ್ಯ ಪಡೆಯಲು ಹೊಸ ಪಕ್ಷ ಕಟ್ಟಬೇಕಿದೆ. ಮುಸ್ಲಿಂ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನೇ ದಲಿತರು ಮತ್ತು ಹಿಂದುಳಿದ ವರ್ಗದವರೂ ಎದುರಿಸುತ್ತಿದ್ದಾರೆ. ಹಾಗಾಗಿ, ಎಲ್ಲರೂ ಒಗ್ಗೂಡಿ ರಾಜಕೀಯ ಶಕ್ತಿ ಪಡೆಯಬೇಕು' ಎಂದರು.

'ಕರ್ನಾಟಕದಲ್ಲಿ ಶೇ. 12 ರಷ್ಟು ಮುಸ್ಲಿಮರಿದ್ದಾರೆ. ಆದರೆ, ಆ ಸಂಖ್ಯೆಗೆ ಅನುಗುಣವಾಗಿ ಜನಪ್ರತಿನಿಧಿಗಳು ಆಯ್ಕೆಯಾಗುತ್ತಿಲ್ಲ. 3200 ಜಿ.ಪಂ ಸದಸ್ಯರಲ್ಲಿ 84 ಮುಸ್ಲಿಂ ಸದಸ್ಯರಿದ್ದಾರೆ. ವಿಧಾನಸಭೆ, ಪರಿಷತ್ ಮತ್ತು ಸಚಿವ ಸಂಪುಟದಲ್ಲಿ ಮುಸ್ಲಿಂ ಪ್ರತಿನಿಧಿಗಳ ಸಂಖ್ಯೆ ಕುಸಿದಿದೆ. ಸದ್ಯ ಕೇವಲ 8 ಮಂದಿ ಇದ್ದಾರೆ. ಕಾಂಗ್ರೆಸ್, ಜೆಡಿಎಸ್‌ನೊಂದಿಗೆ ಕೈಜೋಡಿಸಿದ ಪರಿಣಾಮ ಜಾತ್ಯತೀತ ಮತಗಳು ಛಿದ್ರವಾದವು. ಇದರ ಲಾಭ ಜಾತ್ಯತೀತವಲ್ಲದ ಪಕ್ಷಗಳು ಪಡೆಯುತ್ತಿವೆ' ಎಂದರು.

'ಮುಸ್ಲಿಂ ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧಿಸುವುದು ಇಲ್ಲವೇ ಇತರ ಪಕ್ಷಗಳಿಂದ ಹಣ ಪಡೆದು ನಾಮಪತ್ರ ಹಿಂಪಡೆಯುವುದರಿಂದ, ಮುಸ್ಲಿಂ ಮತಗಳು ವಿಭಜನೆ ಆಗುತ್ತಿವೆ. ಗೆದ್ದರೂ ಪ್ರಮುಖ ಖಾತೆಗಳು ಸಿಗುತ್ತಿಲ್ಲ. ಶಾಸನ ಸಭೆಗಳಲ್ಲಿ ಕಡಿಮೆ ಜನಪ್ರತಿನಿಧಿಗಳಿರುವುದರಿಂದ ಗೋಹತ್ಯೆ ನಿಷೇಧ, ಕೋಮು ಗಲಭೆ, ಚರ್ಚ್ ಮೇಲಿನ ದಾಳಿ ಬಗ್ಗೆ ದನಿ ಎತ್ತಲಾಗುತ್ತಿಲ್ಲ' ಎಂದು ಹೇಳಿದರು.

ಪತ್ರಕರ್ತ ದಿನೇಶ್ ಅಮಿನ್ ಮಟ್ಟು , ''ಮುಸ್ಲಿಮರಿಗೆ ರಾಜಕೀಯದಲ್ಲಿ ಮೀಸಲು ನೀಡಿದರೆ ಸೂಕ್ತ ಪ್ರಾತಿನಿಧ್ಯ ಸಿಗಬಹುದು. ಆದರೆ, ರಾಜಕೀಯ ಶಕ್ತಿಯಿಂದ ಸಮುದಾಯದ ಹಿತ ಕಾಯಲು ಸಾಧ್ಯವೇ? ಮೀಸಲಿನಿಂದ 25-30 ಮಂದಿ ವಿಧಾನಸೌಧದಲ್ಲಿ ಕೂರಬಹುದು. ಇದು ರಾಜಕೀಯ ತಬ್ಬಲಿತನಕ್ಕೆ ಪರಿಹಾರವಾಗುವ ಭರವಸೆ ಇಲ್ಲ. ಮೀಸಲಿನಿಂದ ಗೆದ್ದ ದಲಿತರು, ಹಿಂದುಳಿದವರು ತಮ್ಮ ಜನಾಂಗದ ಹಿತ ಕಾಯುತ್ತಿರುವರೇ ಎಂಬ ಪ್ರಶ್ನೆ ಮೂಡುತ್ತದೆ,'' ಎಂದರು.

ಜೈನ್ ವಿವಿ ಸಹ ಕುಲಪತಿ ಪ್ರೊ. ಸಂದೀಪ್ ಶಾಸ್ತ್ರಿ , ಕೆಪಿಸಿಸಿ ಉಪಾಧ್ಯಕ್ಷ ಪ್ರೊ. ಬಿ.ಕೆ.ಚಂದ್ರಶೇಖರ್, ಸಿಎಸ್‌ಎಸ್‌ಇಐಪಿ ನಿರ್ದೇಶಕ ಪ್ರೊ. ಎಸ್.ಜಾಫೆಟ್, ರಾಜಕೀಯ ವಿಶ್ಲೇಷಣಕಾರ ರವೀಂದ್ರ ರೇಷ್ಮೆ, ಲೇಖಕ ಬಂಜಗೆರೆ ಜಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.